





# ಕ್ಯಾನ್ಸರ್ ವಾರ್ಡಲ್ಲಿ ದೀಪಾವಳಿ

ಹೊತ್ತಿಸಿಲ್ಲ ದೀಪ
ಸಿಡಿಸಿಲ್ಲ ಪಟಾಕಿಗಳ
ಕಾರಿಡಾರಿನ ಗರ್ಭವ ತುಂಬಿದೆ
ದೀರ್ಘತಾಳ್ಮೆಯ ಮೌನ

ಮುಂಬಯಿಯಿಂದ ಬಯಾಪ್ಸಿ ವರದಿಗಾಗಿ
ಅಸಹಾಯ ಕಾಯುತ್ತಾನೆ
ನನ್ನ ಅಪ್ಪ
ಕಾಯಿದೆಯ ಎದುರು ತೀರ್ಪಿಗಾಗಿ
ಕಾತರಿಸುವ ಅಮಾಯಕನಂತೆ

ಅನಿರ್ದಿಷ್ಟತೆಯ ಗರ್ಭದಲ್ಲಿ
ಸಿಕ್ಕಿಕೊಂಡಿದೆ ಅವನ ಭವಿತವ್ಯ
ಬದುಕು ಸಾಗುತ್ತದೆ
ನೀರಸುಳಿಗೆ ಸಿಕ್ಕ ತೆಪ್ಪದಂತೆ

● ಒರಿಯಾ ಮೂಲ: ಮನು ದಾಸ್
ಕನ್ನಡಕ್ಕೆ: ಕಮಲಾಕರ ಕಡವೆ